ಶಿವಮೊಗ್ಗದಲ್ಲಿ ಗ್ರಾಮಲೆಕ್ಕಿಗರಿಗೆ ವಸತಿ ಗೃಹಗಳು ಮತ್ತು ಬಗರ್‌ಹುಕುಂ ಸಕ್ರಮಗೊಳಿಸುವುದು.

2986 - ಶ್ರೀ ಚಂದ್ರಶೇಖರಪ್ಪ. ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕ್ಷೇತ್ರದಲ್ಲಿ ಗ್ರಾಮಲೆಕ್ಕಿಗರಿಗೆ ನಿರ್ಮಾಣ ಮಾಡಿರುವ ವಸತಿ ಗೃಹಗಳೆಷ್ಟು? ಉಳಿದವರಿಗೆ ಮನೆ ನಿರ್ಮಾಣ ಎಂದು ಮಾಡಿಕೊಡಲಾಗುವುದು?*

ಆ) *ಬಗರ್ ಹುಕುಂ ಸಾಗುವಳಿದಾರರಿಗೆ ನಗರ ಪರಿಮಿತಿಯಿಂದ 5 ಕಿ.ಮೀ. ದೂರದವರೆಗೆ ಸಾಗುವಳಿ ಪಟ್ಟ ಕೊಡಬಾರದೆಂದು ಸರ್ಕಾರದ ನಿಯಮ ಇದೆಯೇ?*

ಇ) *ಇದ್ದಲ್ಲಿ ಈ ನಿಯಮಗಳನ್ನು ಸರಳೀಕರಣಗೊಳಿಸಿ ಬಗರ್ ಹುಕುಂ, ಸಾಗುವಳಿ ಪಟ್ಟಾ ಕೊಡಲು ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಶಿವಮೊಗ್ಗ ಕ್ಷೇತ್ರದಲ್ಲಿ ಇಲ್ಲಿಯವರೆಗೆ 14 ಗ್ರಾಮಲೆಕ್ಕಿಗರ ವಸತಿ ಗೃಹಗಳನ್ನು ನಿರ್ಮಿಸಲಾಗಿದೆ. ಆಯವ್ಯಯದಲ್ಲಿ ನೀಡಲಾಗುವ ಅನುದಾನದ ಮೇರೆಗೆ ಹಂತ ಹಂತವಾಗಿ ಉಳಿದವರಿಗೆ ಮನೆ ನಿರ್ಮಾಣ ಮಾಡಿಕೊಡಲಾಗುವುದು.

ಆ) ಹೌದು.

ಇ) ಇಂತಹ ಪ್ರಸ್ತಾವನೆ ಇರುವುದಿಲ್ಲ.

ಬಾಗೇಪಲ್ಲಿ ತಾಲ್ಲೂಕಿನಲ್ಲಿ ಟಾಸ್ಕ್ ಫೋರ್ಸ್ ಸಮಿತಿ

2988 - ಶ್ರೀ. ಚಾಡರೆಡ್ಡಿ (ಚಿಂತಾಮಣಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಟಾಸ್ಕ್ ಫೋರ್ಸ್ ಸಮಿತಿಯ ಶಿಫಾರಸ್ಸಿನಂತೆ ಅಭಾವ ಪರಿಹಾರ ಕಾಮಗಾರಿಗಳು, ಕುಡಿಯುವ ನೀರಿನ ಸೌಲಭ್ಯ ಕಾಮಗಾರಿಗಳು ಮತ್ತು ಗಡಿ ಅಭಿವೃದ್ಧಿ ಕಾಮಗಾರಿಗಳು ನಡೆಯಬೇಕಾಗಿರುವುದು ನಿಜವೆ?*

ಆ) *ಹಾಗಿದ್ದಲ್ಲಿ, ಭಾಗೇಪಲ್ಲಿ ತಾಲ್ಲೂಕು ಟಾಸ್ಕ್ ಫೋರ್ಸ್ ಸಮಿತಿಯ ಸಭೆಯನ್ನು ಕರೆಯದಿರುವುದರಿಂದ ಸರ್ಕಾರದಿಂದ ಮಂಜೂರಾದ ಹಣವು ಯೋಜನೆಗಳಿಗೆ ಉಪಯೋಗವಾಗದೇ ಹೋಗಬಹುದೆನ್ನುವುದು ಸರ್ಕಾರದ ಗಮನಕ್ಕೆ ಬಂದಿಯೇ?*

ಇ) *ಟಾಸ್ಕ್ ಫೋರ್ಸ್ ಸಮಿತಿಯ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳದೆ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ ?*

ಈ) *ಸಮಿತಿಯ ಸಭೆ ನಡೆಸದ ಕಾಮಗಾರಿಗಳನ್ನು ಮಂಜೂರು ಮಾಡಬಹುದಾದರೆ ಸಮಿತಿಯನ್ನು ವಿಸರ್ಜಿಸಲು ಕ್ರಮ ಕೈಗೊಳ್ಳಲಾಗುವುದೆ?*